ಇಂದು ದಿನಾಂಕಃ14.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ನಮ್ಮ ಸಮುದಾಯದಲ್ಲಿ ಹಿಂದೆ ದೇವದಾಸಿ ಪದ್ದತಿ ಇತ್ತು ಎಂದರೆ ಸರಿ. ನನ್ನ ಅಜ್ಜಿ ಮರಿಯವ್ವ ನವರು ದೇವದಾಸಿಯಾಗಿದ್ದರು ಎಂದರೆ ಸರಿಯಲ್ಲ. ಸದರಿ ಮರಿಯವ್ವ ರವರು ಮಲ್ಲಪ್ಪ ಎಂಬುವವರನ್ನು ಮದುವೆಯಾಗಿದ್ದರು. ಆ ರೀತಿ ಆಕೆ ಮದುವೆಯಾಗಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಸದರಿ ಮರಿಯವ್ವನವರಿಗೆ ಮಲ್ಲಪ್ಪ ಮತ್ತು ಹುಚ್ಚೆಂಗೆಪ್ಪ ಎಂಬ ಇಬ್ಬರು ಗಂಡಂದಿರು ಇದ್ದರು ಎಂದರೆ ಸರಿಯಲ್ಲ. ಮಲ್ಲಪ್ಪ ತೀರಿ ಹೋದ ನಂತರ ಮರಿಯವ್ವ ಹುಚ್ಚೆಂಗಪ್ಪನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಮರಿಯವ್ವನವರಿಗೆ ಶಿವಪ್ಪ ಎಂಬುವವರು ಹಿರಿಯ ಮಗ ಎಂದರೆ ಸರಿ. ಸದರಿ ಮರಿಯವ್ವ ರವರು ಪೋತಿಯಾದ ನಂತರ ತನ್ನ ಹಿರಿಯ ಮಗನಾದ ಶಿವಪ್ಪನ ಹೆಸರಿಗೆ ದಾವೇದ ಆಸ್ತಿ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಶಿವಪ್ಪ ಮತ್ತು ರೇವಣೆಪ್ಪ ಅಣ್ಣ ತಮ್ಮಂದಿರು ಎಂದರೆ ಸಾಕ್ಷಿಯು ಇಬ್ಬರಿಗೂ ಸಂಬಂದ ಇಲ್ಲ ಎಂದು ನುಡಿದಿರುತ್ತಾರೆ.

2. ನಾವು ಮರಿಯವ್ವ ವಾರಸುದಾರರು ಎಂದು ತೋರಿಸಲು ತಹಶೀಲ್ದಾರರವರು ನೀಡಿದ ವಾರಸಾ ಪತ್ರವನ್ನು ಹಾಜರಪಡಿಸಿರುತ್ತೇನೆ. ಆ ರೀತಿ ನಾನು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ದಾವೇದ ಆಸ್ತಿಯನ್ನು ಅರ್ಧ ಭಾಗ ಶಿವಪ್ಪರವರು, ಅರ್ಧ ಭಾಗ ರೇವಣೆಪ್ಪ ರವರು ವಹಿವಾಟು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಶಿವಪ್ಪ ರವರು ತೀರಿಕೊಂಡು 8 ವರ್ಷ ಆಗಿರುತ್ತದೆ. ಶಿವಪ್ಪ ರವರು ತನ್ನ ಜೀವಿತಾಕಾಲದಲ್ಲಿ ಅರ್ಧ ಆಸ್ತಿಯನ್ನು ರೇವಣೆಪ್ಪ ರವರಿಗೆ ಪಂಚಾಯತಿ ದಾಖಲೆಗಳ ಮೂಲಕ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯು ನನ್ನ ಅಜ್ಜಿಗೆ ತಲಾ ತಲಾಂತರಗಳಿಂದ ಬಂದಂತಹ ಆಸ್ತಿ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ. ಆ ಕಾರಣದಿಂದ ದಾವಾ ಆಸ್ತಿ ಮರಿಯವ್ವ ರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಮರಿಯವ್ವ ರವರು ತೀರಿಕೊಂಡ ನಂತರ ನಾವು ವಾರಸುದಾರರು ಎಂದು ಹೇಳಿ ಸದರಿ ಮರಿಯವ್ವ ರವರ ಆಸ್ತಿಯನ್ನು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳಲು ವರದಿಯನ್ನು ನೀಡಿರುತ್ತೇವೆ.

4. ನಾವು ಗುಂಡಗಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ದೂದಿಹಳ್ಳಿ ಗ್ರಾಮದಲ್ಲಿರುವ ಜನರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಹುಚ್ಚೆಂಗಪ್ಪ ಕೆಳಗಿನಮನಿ, ಸಾಃ ದೂದಿಹಳ್ಳಿ

ಎಂಬುವವರು ನಮ್ಮ ಊರಿನಲ್ಲಿ ಇರುವುದಿಲ್ಲ. ಪ್ರತಿವಾದ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಪ್ರತಿವಾದ ಪತ್ರದ ಖಂಡಿಕೆ 11 ರಲ್ಲಿ ಹೇಳಿರುವ ಅಂಶಗಳು ಸತ್ಯ ಇರುತ್ತದೆ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಗಳು ವಾದಿಯ ಹೆಸರಿನಲ್ಲಿ ಇದ್ದವು ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದು ನುಡಿದಿರುತ್ತಾರೆ. ನಿಪಿ-1 ರಲ್ಲಿ ವಾದಿಯ ಹೆಸರು ನಮೂದಾಗಿರುತ್ತದೆ ಎಂದೆ ಸಾಕ್ಷಿಯು ಅದನ್ನು ಖೊಟ್ಟಿಯಗಿ ನಮೂದು ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ-2 ರಿಂದ 5 ರಂತೆ ವಾದಿ ಕಂದಾಯವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಅದಕ್ಕೂ ಪೂರ್ವದಲ್ಲಿ ನಿಪಿ-6 ರಲ್ಲಿ ವಾದಿಯ ಹೆಸರು ಇರುತ್ತದೆ ಸಾಕ್ಷಿಯು ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

5. ವಾದಿ ದಾವೆ ಹೂಡಿದ ನಂತರ ನಾನು ಒಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ 160/2018 ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆ ವಿಚಾರಣೆ ಬಾಕಿ ಇರುವ ಬಗ್ಗೆ ನಾನು ನಮೂದಿಸಿಲ್ಲ ಎಂದರೆ ಸರಿ. ವಾದಿಯು ದಾವಾ ಆಸ್ತಿಯಲ್ಲಿ ಮನೆಯನ್ನು ಅರ್ಧಕ್ಕೆ ಕಟ್ಟಿ ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿ ಇರುವ ಖಾತೆಯನ್ನು ರದ್ದುಗೊಳಿಸುವಂತೆ ಕೋರಿ ನಾವು ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಮುಂದೆ ಮೇಲ್ಮನವಿಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಪಂಚಾಯತಿ ಅಧಿಕಾರಿಗಳಿಗೆ ಖಾತೆ ರದ್ದು ಗೊಳಿಸುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರವನ್ನು ಸಲ್ಲಿಸುವಾಗ ಸದರಿ ಮೇಲ್ಮನವಿ ವಿಚಾರಣೆ ಬಾಕಿ ಇತ್ತು ಎಂದರೆ ಸರಿ.

6. ಅಸಲು ದಾವಾ ಸಂಖ್ಯೆ 160/2018 ರಂತೆ ಡಿಕ್ರಿ ಪ್ರಕಾರ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ. 1984-85 ರಿಂದಲೂ ವಾದಿಯೇ ದಾವಾ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1990-91 ನೇ ಸಾಲಿನ ಕರ ನಿರ್ಧರಣಾ ಪಟ್ಟಿಯನ್ನು ನಾವು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ತಾಲ್ಲೂಕು ಪಂಚಾಯತಿಯಿಂದ ದಿನಾಂಕ 05-05-2019 ರಂದು ಆಗಿದೆ ಎಂದರೆ ಸರಿ. ರಾಜಕೀಯ ಪ್ರಭಾವನ್ನು ಬೀರಿ ನಾನು ತಾಲ್ಲೂಕು ಪಂಚಾಯತಿ ಹಿರೇಕರೊರನಿಂದ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.